ದಿನಾಂಕ:05.08.2024 ರಂದು ಸಾಕ್ಷಿಯನ್ನು ಕರೆಸಿ ಶಪಥ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿಗಳ ಪರ ಶ್ರೀ ಎಂ.ಪಿ. ವಕೀಲರಿಂದಃ**

ನಾನು ಈ ದಾವೆಯಲ್ಲಿ 3 ನೇ ವಾದಿ ಇರುತ್ತೇನೆ. ನಾನು ಈ ದಿನ ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರ ಸಲ್ಲಿಸಿದ್ದು ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತದೆ.

5 ಧೃಢೀಕೃತ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು, ಅದನ್ನು **ನಿ.ಪಿ.1 ರಿಂದ 5** ಎಂದು, ಒಂದು ವಂಶವೃಕ್ಷ ಪ್ರಮಾಣಪತ್ರ ಹಾಜರುಪಡಿಸಿದ್ದು, ಅದನ್ನು **ನಿ.ಪಿ.6** ಎಂದು, 21 ಗಣಕೀಕೃತ ಪಹಣಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು **ನಿ.ಪಿ.7 ರಿಂದ 28** ಎಂದು, ದಿನಾಂಕ 03.5.2020 ರ ಕ್ರಯಪತ್ರದ ಧೃಡೀಕೃತ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು **ನಿ.ಪಿ.29** ಎಂದು, ನಿ.ಪಿ.29 ರ ಬೆರಳಚ್ಚು ನಕಲನ್ನು ಹಾಜರುಪಡಿಸಿದ್ದು, ಅದನ್ನು **ನಿ.ಪಿ.29(ಎ)** ಎಂದು, ಒಂದು ಗೆಜೆಟ್ ದಾಖಲೆ ಹಾಜರುಪಡಿಸಿದ್ದು, ಅದನ್ನು **ನಿ.ಪಿ.30** ಎಂದು, ಕೆಐಡಿಬಿಯ ಎರಡು ನೋಟೀಸ್ ಗಳನ್ನು ಹಾಜರುಪಡಿಸಿದ್ದು, ಅವುಗಳನ್ನು **ನಿ.ಪಿ.31 ಮತ್ತು 32** ಎಂದು, ಒಂದು ಮೆಟ್ರೋ ಅಧಿಕಾರಿಗಳು ಎಸ್ಎಲ್ಒ ರವರಿಗೆ ನೀಡಿರುವ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು **ನಿ.ಪಿ.33** ಎಂದು, 1 ನೇ ಪ್ರತಿವಾದಿ ಕಳುಹಿಸಿರುವ ಕೆವಿಯೆಟ್ ನಕಲನ್ನು ಹಾಜರುಪಡಿಸಿದ್ದು, ಅದನ್ನು **ನಿ.ಪಿ.34** ಎಂದು, ಎರಡು ಸರ್ವೆ ನಕ್ಷೆಗಳ ಧೃಡೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು **ನಿ.ಪಿ.35 ಮತ್ತು 36** ಎಂದು, ಆರು ಹಿಸ್ಸಾ ಟಿಪ್ಪಣಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು **ನಿ.ಪಿ.37 ರಿಂದ 42** ಎಂದು, ನಾಲ್ಕು ಸರ್ವೆ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು **ನಿ.ಪಿ.43 ರಿಂದ 46** ಎಂದು, ಗಿರೀಶ್ ಮತ್ತು ಅಶೋಷಿಯೇಟ್ಸ್ ರವರ ಕಛೇರಿಯಿಂದ ಬಂದಿರುವ ಹರಿದ ಲಕೋಟೆಯನ್ನು ಧೃಡೀಕೃತ ಪತ್ರವನ್ನು

ಹಾಜರುಪಡಿಸಿದ್ದು, ಅದನ್ನು **ನಿ.ಪಿ.47** ಎಂದು, ಕೆಐಡಿಬಿ ರವರು ಹೊರಡಿಸಿದ ಆದೇಶದ ಧೃಡೀಕೃತ ಪತ್ರವನ್ನು ಹಾಜರುಪಡಿಸಿದ್ದು, ಅದು ಒಟ್ಟು 17 ಪುಟಗಳು ಇದ್ದು ಅವುಗಳನ್ನು ಒಟ್ಟಾಗಿ **ನಿ.ಪಿ.48** ಎಂದು, ಒಂದು ಗಣಕೀಕೃತ ಹಕ್ಕು ಬದಲಾವಣೆ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು **ನಿ.ಪಿ.49** ಎಂದು ಗುರುತಿಸಲಾಯಿತು.

ಆದುದರಿಂದ ನಾನು ಕೋರುತ್ತಿರುವಂತೆ ದಾವೆಯನ್ನು ಡಿಕ್ರಿ ಮಾಡಬೇಕೆಂದು ಎಂದು ಪ್ರಾರ್ಥಿಸುತ್ತೇನೆ.

<u>ಪಾಟೀ ಸವಾಲುಃ **1** ನೇ ಪ್ರತಿವಾದಿಪರ ಶ್ರೀ ಬಿ.ಎಸ್ ಆರ್ ವಕೀಲರಿಂದಃ</u>

ಪಾಟೀ ಸವಾಲಿಗಾಗಿ ಸಮಯಾವಕಾಶ ಕೇಳಿದ್ದು, ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)
( ಓ ಹೇ ಕೇ ಸ ಇ ಒ)

(ವಿಜೇತ್ ವಿ.)
C/C. 22 ನೇ ಹೆಚ್ಚುವರಿ ನಗರ ಸಿವಿಲ್ ನ್ಯಾಯಾಧೀಶರು,
ಬೆಂಗಳೂರು.